growing countries like Brazil is alternative, it affects the supply-demand and hence the prices fluctuate according to global production.

Cardamom, pepper and ginger: The prices of these crops are dependent on global supply and demand position, local weather conditions etc.

d) There is no proposal to waive off the interest amount of these small farmers in Co-operative Department.

1334 (1099) ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಬೆಳ್ಳಾವಿ) : ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮತ್ಸ್ಯಾಶ್ರಯ ಯೋಜನೆ ಅನ್ವಯ ತುಮಕೂರು ಜಿಲ್ಲೆಯಲ್ಲಿ ತೆಗೆದುಕೊಂಡಿರುವ ಕಾರ್ಯಕ್ರಮಗಳೇನು ;

ಆ) ಬೆಳ್ಳಾವಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ಮಂಜೂರಾಗಿರುವ ಮನೆಗಳೆಷ್ಟು ; ಅರ್ಹ ಫಲಾನುಭವಿಗಳ ವಿವರ ನೀಡುವುದು ;

ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು) –

ಅ) ತುಮಕೂರು ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆಯು ನಿವೇಶನ ಹೊಂದಿದ ಅರ್ಹ ನಿರ್ವಸತಿ ಮೀನುಗಾರರಿಗೆ ಮತ್ಸ್ಯಾಶ್ರಯ ಯೋಜನೆಯಡಿ ಮನೆಗಳನ್ನು ಮನೆಗಳನ್ನು ನಿರ್ಮಿಸಿಕೊಳ್ಳಲು ಆರ್ಥಿಕ ಸಹಾಯ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಮತ್ಸ್ಯಾಶ್ರಯ 1ನೇ ಹಂತದ ಯೋಜನೆಯಡಿ ತುಮಕೂರು ಜಿಲ್ಲೆಗೆ ಮಂಜೂರಾದ 130 ಮನೆಗಳ ನಿರ್ಮಾಣ ಪೂರ್ಣಗೊಳಿಸಲಾಗಿದೆ. ಮತ್ಸ್ಯಾಶ್ರಯ 2ನೇ ಹಂತದ ಯೋಜನೆಯಡಿ ಸದರಿ ಜಿಲ್ಲೆಗೆ 260 ಮನೆಗಳು ಮಂಜೂರಾಗಿದ್ದು 227 ಮನೆಗಳು ಪೂರ್ಣಗೊಂಡಿದ್ದು ಉಳಿದ ಮನೆಗಳ ನಿರ್ಮಾಣವು ಪ್ರಗತಿಯಲ್ಲಿರುತ್ತವೆ.

ಆ) ಬೆಳ್ಳಾವಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮತ್ಸ್ಯಾಶ್ರಯ ಯೋಜನೆಯಡಿ ಮನೆಗಳು ಮಂಜೂರಾಗಿರುವುದಿಲ್ಲ.

1335 (1100) : ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಬೆಳ್ಳಾವಿ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಬಡವನಹಳ್ಳಿಯ ಪುಷ್ಪೋದ್ಯಮ ಕೃಷಿಯನ್ನು ಹೆಚ್ಚಾಗಿ ಅವಲಂಬಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಪುಷ್ಪೋದ್ಯಮ ಕೃಷಿ ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

ಇ) ಈ ನಿಟ್ಟಿನಲ್ಲಿ ಬಡವನಹಳ್ಳಿಯಲ್ಲಿ ಶೈತ್ಯಾಗಾರ (ಕೋಲ್ಡ್ ಸ್ಟೋರೇಜ್) ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ ?

ಶ್ರೀ ಶಿವಾನಂದ ನಾಯ್ಕ (ತೋಟಗಾರಿಕೆ ಸಚಿವರು) –

ಅ) ಹೌದು. ಬಡವನಹಳ್ಳಿಯು ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿಗೆ ಸೇರಿದ್ದು, ಈ ಭಾಗದಲ್ಲಿ ರೈತರು ಪುಷ್ಪ ಕೃಷಿಯನ್ನು ಹೆಚ್ಚಾಗಿ ಅವಲಂಭಿಸಿರುತ್ತಾರೆ. ಮಧುಗಿರಿ ತಾಲ್ಲೂಕಿನಲ್ಲಿ ಸುಮಾರು 575 ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ಸಾಂಪ್ರದಾಯಿಕ ಪುಷ್ಪಗಳಾದ ಮಲ್ಲಿಗೆ, ಕಾಕಡ, ಗುಲಾಬಿ, ಸುಗಂಧರಾಜ, ಸೇವಂತಿಗೆ, ಚೆಂಡು ಹೂವು, ಕನಕಾಂಬರ, ಆಸ್ಟರ್ ಇತ್ಯಾದಿ ಹೂಗಳನ್ನು ಬೆಳೆಯಲಾಗುತ್ತಿದೆ.

ಆ) ಪುಷ್ಪೋದ್ಯಮ ಕೃಷಿ ಅಭಿವೃದ್ಧಿಗಾಗಿ ತೋಟಗಾರಿಕೆ ಇಲಾಖೆಯು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ :

1. ಸಾಂಪ್ರದಾಯಿಕ ಪುಷ್ಪಗಳಾದ ಮಲ್ಲಿಗೆ, ಕಾಕಡ, ಗುಲಾಬಿ, ಸುಗಂಧರಾಜ, ಸೇವಂತಿಗೆ, ಚೆಂಡು ಹೂವು, ಕನಕಾಂಬರ, ಆಸ್ಟರ್ ಇತ್ಯಾದಿ ಹೂಗಳ ಪ್ರದೇಶಾಭಿವೃದ್ಧಿಗಾಗಿ ರೈತರಿಗೆ ಅಗತ್ಯವಿರುವ ಸಸ್ಯಸಾಮಗ್ರಿಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ.

2. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಕಟ್‌ಫ್ಲವರ್ಸ್, ಬಲ್ಬಸ್ ಫ್ಲವರ್ಸ್ ಮತ್ತು ಸಾಂಪ್ರದಾಯಿಕ ಪುಷ್ಪಗಳ ಬೇಸಾಯ/ಪ್ರದೇಶ ವಿಸ್ತರಣೆಗಾಗಿ ಸಹಾಯಧನವನ್ನು ನೀಡಲಾಗುತ್ತಿದೆ ಹಾಗೂ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ.

3. ರೈತರಿಗೆ ವಿಚಾರ ಸಂಕಿರಣಗಳ ಮೂಲಕ ವೈಜ್ಞಾನಿಕ ಪುಷ್ಪಾಭಿವೃದ್ಧಿ ಮಾಡುವ ಬಗ್ಗೆ ತರಬೇತಿ ನೀಡಲಾಗುತ್ತಿದೆ.

4. ರೈತರನ್ನು ರಾಜ್ಯದಲ್ಲಿ ಹಾಗೂ ಹೊರರಾಜ್ಯಗಳಲ್ಲಿನ ಪುಷ್ಪೋದ್ಯಮದ ಬಗೆಗಿನ ಸಾಧನೆಗಳನ್ನು ಅರಿಯಲು ಶೈಕ್ಷಣಿಕ ಪ್ರವಾಸಕ್ಕೆ ಕರೆಯೊಯ್ಯಲಾಗುತ್ತಿದೆ.

5. ಪುಷ್ಪೋದ್ಯಮದಲ್ಲಿ ನಿರತರಾದ ರೈತರು ತಾವು ಬೆಳೆದ ಪುಷ್ಪಗಳನ್ನು ವೈಜ್ಞಾನಿಕವಾಗಿ ವಿಂಗಡಿಸಿ ಸೂಕ್ತವಾದ ರೀತಿಯಲ್ಲಿ ಪ್ಯಾಕ್ ಮಾಡಲು ಅನುಕೂಲವಾಗುವಂತೆ ಪ್ಯಾಕ್‌ಹೌಸ್ ನಿರ್ಮಿಸಲು ಸಹಾಯಧನ ನೀಡಲಾಗುತ್ತಿದೆ.

6. ಪುಷ್ಪೋದ್ಯಮ ಅಭಿವೃದ್ಧಿಗಾಗಿ ಪುಷ್ಪಗಳ ಆಧುನಿಕ ಬೇಸಾಯ, ಮಾರಾಟ ಇತ್ಯಾದಿ ಮಾಹಿತಿಗಳನ್ನು ವಿವಿಧ ವಿಸ್ತರಣಾ ಮಾಧ್ಯಮಗಳಾದ ದೂರದರ್ಶನ, ಆಕಾಶವಾಣಿ, ವಿಚಾರವಿನಿಮಯ, ಚರ್ಚಾಕೂಟಗಳು, ವಿಡಿಯೋ/ಸಿ.ಡಿ. ಪ್ರದರ್ಶನ, ಪ್ರಶ್ನೋತ್ತರಗಳು, ಉಪಗ್ರಹ ಆಧಾರಿತ ಕಾರ್ಯಕ್ರಮ, ಹಸ್ತಪ್ರತಿಗಳು ಹಾಗೂ ಕೈಪಿಡಿಗಳು ಇತ್ಯಾದಿಗಳ ಮೂಲಕ ಪ್ರಚಾರ ಮಾಡಲಾಗುತ್ತಿದೆ.

ಇ) ಹೌದು, ಬಡವನಹಳ್ಳಿ ಸಾಂಪ್ರದಾಯಿಕ ಹೂಗಳ ಸಗಟು ಮಾರುಕಟ್ಟೆ ಕಾರ್ಯನಿರತವಾಗಿದ್ದು, ಇಲ್ಲಿ ಹೂಗಳನ್ನು ತಾತ್ಕಾಲಿಕವಾಗಿ ಸಂರಕ್ಷಿಸಲು ಒಂದು ತಂಪು ಹವೆಯ ಘಟಕದ (Cool House) ಅವಶ್ಯಕತೆಯಿದೆ. ಹೂ ಬೆಳೆಗಾರರ ಸಂಘ ಅಥವಾ ಖಾಸಗಿಯವರು ಇದರ ನಿರ್ಮಾಣಕ್ಕೆ ಮುಂದೆ ಬಂದಲ್ಲಿ ರಾಜ್ಯ/ಭಾರತ ಸರ್ಕಾರದ ಯೋಜನೆಗಳಡಿಯಲ್ಲಿ ಸಹಾಯಧನ ನೀಡಲಾಗುವುದು.

1336 (1553) : ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2003ನೇ ಸಾಲಿನಲ್ಲಿ ಸೇಡಂ ತಾಲ್ಲೂಕಿನಲ್ಲಿ ಚಾಲ್ತಿಯಲ್ಲಿದ್ದ ಪಡಿತರ ಚೀಟಿಗಳ ಸಂಖ್ಯೆ ಎಷ್ಟು ; (ಬಿಪಿಎಲ್, ಅಂತ್ಯೋದಯ, ಅನ್ನಪೂರ್ಣ ಮತ್ತು ಎಪಿಎಲ್ ಪಡಿತರ ಚೀಟಿಗಳ ವಿವರ ನೀಡುವುದು) ;

ಆ) ಸೇಡಂ ತಾಲ್ಲೂಕಿನಲ್ಲಿ ವಿತರಿಸಲು ಉದ್ದೇಶಿಸಿರುವ ಪಡಿತರ ಚೀಟಿಗಳ ಸಂಖ್ಯೆ ಎಷ್ಟು ; (ಬಿಪಿಎಲ್, ಅಂತ್ಯೋದಯ, ಅನ್ನಪೂರ್ಣ ಮತ್ತು ಎಪಿಎಲ್ ಪಡಿತರ ಚೀಟಿಗಳ ವಿವರ ನೀಡುವುದು) ;

ಇ) ಮೇಲೆ ತಿಳಿಸಿದ ಪಡಿತರ ಚೀಟಿಗಳನ್ನು ಯಾವಾಗ ವಿತರಿಸಲಾಗುವುದು ;

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಗ್ರಾಹಕರ ವ್ಯವಹಾರಗಳ ಸಚಿವರು) –

ಅ) 2003ನೇ ಸಾಲಿನಲ್ಲಿ ಸೇಡಂ ತಾಲ್ಲೂಕಿನಲ್ಲಿ ಚಾಲ್ತಿಯಲ್ಲಿದ್ದ ಪಡಿತರ ಚೀಟಿಗಳ ಸಂಖ್ಯೆ ಈ ಕೆಳಕಂಡಂತಿದೆ:–

ಬಿಪಿಎಲ್	–	25,698
ಅಂತ್ಯೋದಯ	–	3,085
ಅನ್ನಪೂರ್ಣ	–	0
ಎಪಿಎಲ್	–	9,525
ಒಟ್ಟು	–	38,308